**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 43/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಮಂಜು | ಪಿಡಬ್ಲ್ಯೂ-09 |
| ತಂದೆಯ ಹೆಸರು | - ಮಹೇಶ್ @ ಮಲ್ಲೇಶಪ್ಪ | ಸಿಡಬ್ಲ್ಯೂ -09 |
| ವಯಸ್ಸು | - 33 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ದೊಡ್ಡಿಹಟ್ಟಿ ಸಖರಾಯಪಟ್ಟಣ | |

ದಿನಾಂಕಃ 05-03-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಚಾಸಾ.1 ಗೊತ್ತು. ಫ್ರಾಸಾ.8 ಮತ್ತು ಚಾಸಾ.12 ರವರು ಗೊತ್ತು. ಉಳಿದ ಸಾಕ್ಷಿದಾರರು ಗೊತ್ತಿಲ್ಲ.
2. ಆರೋಪಿಯಿಂದ ಚಾಸಾ.1 ರವರಿಗೆ ಏನು ತೊಂದರೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

**3.** ದಿಃ 21-02-2023 ರಂದು ರಾತ್ರಿ 9.30 ಗಂಟೆಗೆ ನಾನು, ಪ್ರಾಸಾ.8 ಮತ್ತು ಚಾಸಾ.10 ರವರು ಸಖರಾಯಪಟ್ಟಣದ ಅಂತರಘಟ್ಟಮ್ಮ ದೇವಸ್ಥಾನದ ಮುಂದಿನ ರಸ್ತೆಯಲ್ಲಿ ಮಾತನಾಡುತ್ತಾ ನಿಂತಿದ್ದಾಗ ಸಖರಾಯಪಟ್ಟಣದ ರಂಗನಾಥ ಸ್ವಾಮಿ ದೇವಸ್ಥಾನದ ಮುಂದಿನ ರಸ್ತೆಯಿಂದ ಅರಸುಮಕ್ಕಳ ಬೀದಿ ಕಡೆಗೆ ಹೋಗುವ ರಸ್ತೆಯ ತಿರುವಿನಲ್ಲಿ ಜೋರಾಗಿ ಗಲಾಟೆಯಾಗುತ್ತಿರುವ ಶಬ್ಧ ಕೇಳಿಸಿತು ಎಂದರೆ ಸರಿಯಲ್ಲ. ಆಗ ನಾವು ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿಯು ಚಾಸಾ.1 ರವರನ್ನು ಕುರಿತು, ನನಗೆ ಪದೇ ಪದೇ ತೊಂದರೆ ಕೊಡುತ್ತೀಯಾ, ನಿನಗೆ ಯಾವ ಹಣ ಕೊಡಬೇಕು, ಬೋಳಿಮಗನೇ, ಸೂಳೆಮಗನೇ ಎಂದು ಬೈಯುತ್ತಿದ್ದು, ಆ ಸಮಯದಲ್ಲಿ ಚಾಸಾ.1 ರವರ ಸ್ಕೂಟರ್ ಇದ್ದು ಆರೋಪಿಯ ಬುಲೇಟ್ ಬೈಕ್ ಕೆಳಗೆ ಬಿದ್ದಿತ್ತು ಎಂದರೆ ಸರಿಯಲ್ಲ. ಆರೋಪಿ ನಮ್ಮನ್ನು ನೋಡುತ್ತಿದ್ದಂತೆ ಚಾಸಾ.1 ರವರನ್ನು ಕುರಿತು, ಈ ದಿವಸ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ತನ್ನ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ.1 ರವರ ತಲೆಗೆ ಬಲವಾಗಿ ಹೊಡೆದನು ಮತ್ತು ತನ್ನ ಕೈಯಲ್ಲಿದ್ದ ಕತ್ತಿಯಿಂದ ಚಾಸಾ.1 ರವರ ಹೊಟ್ಟೆ ಮತ್ತು ಕುತ್ತಿಗೆಯ ಬಳಿ ಚುಚ್ಚಿದನು ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಕುಸಿದು ಬಿದ್ದಿದ್ದು ನಾವುಗಳು ಸೇರಿ ಗಲಾಟೆಯನ್ನು ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿಯು ತನ್ನ ಕೈಯಲ್ಲಿದ್ದ ಮಚ್ಚು ಮತ್ತು ಕತ್ತಿಯನ್ನು ಬೈಕಿನಲ್ಲಿ ಇಟ್ಟುಕೊಂಡು ಹೋದನು ಎಂದರೆ ಸರಿಯಲ್ಲ.

**4.** ನಂತರ ಪ್ರಾಸಾ.8 ರವರು ಆಂಬ್ಯುಲೇನ್ಸಿಗೆ ಫೋನ್ ಮಾಡಿ ಚಾಸಾ.1 ರವರನ್ನು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು

ಮಾಡಿ ಅವರ ಸಂಬಂಧಿಕರಿಗೆ ಫೋನ್ ಮಾಡಿ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಯ ವೈದ್ಯರು ಚಾಸಾ.1 ರವರನ್ನು ಪರೀಕ್ಷಿಸಿ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿದ್ದು ಅವರ ಸಂಬಂಧಿಕರು ಅವರನ್ನು ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲು ಮಾಡಿದ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ನಂತರ ಆ ಬಗ್ಗೆ ಚಾಸಾ.1 ರವರು ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ಕೊಟ್ಟ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

5. ದಿನಾಂಕ 22-06-2023 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.17 ಎಂದು ಗುರುತಿಸಲಾಯಿತು.

**6.** ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.17 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

7. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆಯಲ್ಲಿ ಓದಲು ಬರೆಯಲು ಬರುತ್ತದೆ. ನನಗೆ ಸಾಮಾನ್ಯ ಜ್ಞಾನ ಇದೆ.

<u>ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ